ಮೈಸೂರ ಗೆಜಿಟ.

ನಂ. 33 ಸರ್ಕಾರದಿಂದ ಪಾಯಿಷ್ ಆದ್ದು. ಸ್ಯ 1884.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 16, ಸ್ಯ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಟೆರಿಯವರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಖಾತೆ ಡೈರೆಕ್ಟರು, ಅಂಚೆ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಣಗಳು, 1884ನೇ ಇಸವಿಯ IIIನೇ ನಂಬರ್ ರೆಗ್ಯೂಲೇಷ್ಣ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 16ನೇ ಜುಲೈ 1884.

ನಂ. 79.—ಹಿಡುವಳಿಯಲ್ಲಿ ಯಿರದೇ ಯಿರತಕ್ಕ ಸರಕಾರದ ಜಮೀರ್ಗಳೊಳಗಣ ಹುಲ್ಲುಗಾವಲ್ ಹರಾಜ್. ವಿಷಯವನ್ನು ಕುರಿತು ಇದರಡಿಕಂಡ ನಿಬಂಧನೆಗಳು ಅಜಮಾಯಿಷೀ ತರೀಕ್ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯ ಬ್ಗ್ಯೆ ಪಾಯಿಷ್ ಮಾಡಲ್ಪಟ್ಟಿರುತಿವೆ:—

1. ಅಜಮಾಯಿಷೀ ತರೀಕ್ ಈ ಸಾಲ್‌ನಲ್ಲಿ ಹುಲ್ಲುಬನ್ನೀ ಹರಾಜುಗಳು ಹಾಕಲ್ಪಡಕೂಡದು.

2. 1882—83 ಮತ್ತು 83—84ನೇ ಇಸವಿಗಳಲ್ಲಿ ಪ್ರತಿ ಗ್ರಾಮದೊಳಗಣ ಸರಾಸರಿ ಹುಲ್ಲುಬನ್ನೀ ಹುಟ್ಟುವಳಿಯನ್ನು ಕರಾರ್‌ವ್ಯಾಕಾ ಲೆಕ್ಕಮಾಡಿ ತನ್ಮೂಲಕ ಗೊತ್ತಾದ ಮೊಬಲಗ್ಯೆ ಆ ಗ್ರಾಮದೊಳು ಹಿಡುವಳಿಯಲ್ಲಿಲ್ಲದಿರುವ ಸರ್ಕಾರ್ ಜಮೀರ್ಗಳಲ್ಲಿ ಮೇಯಿಸುವ ಹಕ್ಕನ್ನು ಸಾಲ್‌ಮಜಕೂರಿಗೆ ಸದರೀ ಗ್ರಾಮ ನಿವಾಸಿಗಳಿಗೆ ಕೊಡತಕ್ಕದ್ದು.

3. ಈ ಪರತಾಗಳನ್ನು ಅನುಸರಿಸಿ ಗ್ರಾಮಸ್ಥರು ಮೇಯಿಸುವ ಹಕ್ಕನ್ನು ಅಂಗೀಕರಿಸಿದರೆ ಗ್ರಾಮಸ್ಥರೆಲ್ಲರಿಂದ ಕೊಡಲ್ಪಡತಕ್ಕ ಮೊಬಲಗನ್ನು ವಿಶಿಷ್ಟ ಜಮ್ಮಿದಾರರುಗಳೂ ಗ್ರಾಮದ ಇತರ ನಿವಾಸಿಗಳು ಸಹ ತಮ್ಮೊಳು ತಾವೇ ಹಂಚಿಕೊಂಡು ಅಂತಾ ವಿಭಾಗ ಪ್ರಕಾರ ಪ್ರತಿ ಮನುಷ್ಯನೂ ಕೊಡಬೇಕಾದ ಮೊಬಲಗನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರ್ಮಾಡಿ, ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರೆಲ್ಲರೂ ಸದರೀ ಪಟ್ಟಿಗೆ ರುಜು ಮಾಡಬೇಕಲ್ಲದೆ, ಪಟೇಲ್ ಶಾನಭೋಗರು ಸಹ ರುಜು ಮಾಡತಕ್ಕದ್ದು. ಗ್ರಾಮದಿಂದ ಕೊಡಲ್ಪಡಬೇಕಾದ ಪೂರ್ತಿ ಮೊಬಲಗನ್ನು ಗ್ರಾಮದ ಪ್ರತಿ ಮನುಷ್ಯನೂ ಹಂಚಿಕೊಳ್ಳಬೇಕಾದ್ದು ಅವರು ಪರಸ್ಪರ ಮಾಡಿಕೊಂಡ ಸ್ವಂತಕರಾರಾಗಿರುತ್ತೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

4. ಅಮಲ್ದಾರರು ಅಂತಾ ಪಟ್ಟಿಗಳನ್ನು ತನಿಖೀ ಮಾಡಿ ಅದರಲ್ಲಿ ನಮೂದಿಸಿರುವ ಯೇರ್ಪಾಡುಗಳು ತೃಪ್ತಿಕರವಾಗಿದೆಯೇ ಯೆಂದು ಗ್ರಾಮಸ್ಥರನ್ನು ಕೇಳತಕ್ಕದ್ದು. ಯಾವನ ಹೆಸರಿಗೆ ಮೊಬಲಗು ದಾಖಲ್ಮಾಡಲ್ಪಟ್ಟಿರುತಿದೆಯೋ ಅಂತಾ ಪ್ರತಿ ಮನುಷ್ಯನನ್ನೂ ಬದಸ್ತೂರ್ ಕೇಳತಕ್ಕದ್ದು. ಅಂತಾ ವಿಚಾರಣೆಯಲ್ಲಿ, ಸದರೀ ಯೇರ್ಪಾಡು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಸಮ್ಮತವಾದದ್ದೆಂದು ಅಮಲ್ದಾರರಿಗೆ ತೃಪ್ತಿಕರವಾಗಿ ಕಂಡು ಬಂದರೆ ಸದರೀ ಅಂಶವನ್ನು ಪ್ರಸಕ್ತ ಪಟ್ಟೀಯಲ್ಲಿ ಸ್ಪಷ್ಟಸ್ತೂರ್ ಬರೆದು ದಾಖಲೆಯ ಬಗ್ಗೆ ಶಾನಭೋಗನ ವಶದಲ್ಲಿಡತಕ್ಕದ್ದು. ತರುವಾಯ ಯಾವ ಮನುಷ್ಯನ ಹೆಸರಿಗಾಗಲಿ ಸದರೀ ಪಟ್ಟಿಗಳಲ್ಲಿ ದಾಖಲ್ಮಾಡಲ್ಪಟ್ಟಿರುವ ಮೊಬಲಗನ್ನು ಅವನಿಂದ ವಸೂಲ್ಮಾಡತಕ್ಕ ಬಾಕೀಯೆಂದು ಅವನ ಖಾತೆಯಲ್ಲಿ ದಾಖಲ್ಮಾಡಿ ಅದು ಜಮ್ಮಿ ಕಂದಾಯದಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಯಾವ ಗ್ರಾಮಸ್ಥರೇ ಆಗಲಿ ಸದರೀ ಗ್ರಾಮದೊಳು ಹಿಡುವಳಿಯಲ್ಲಿರದೇ ಯಿರುವ ಸರ್ಕಾರ್ ಜಮ್ಮಿನಿನಲ್ಲಿ ಮೇಯಿಸುವ ಹಕ್ಕನ್ನು ಯೆರಡನೇ ಕಲಮಿನ ಪ್ರಕಾರ ಗೊತ್ತು ಮಾಡಲ್ಪಟ್ಟ ಮೊಬಲಗಿಗೆ ಅಂಗೀಕರಿಸುವದಕ್ಕೆ ಅಸಮಾಧಾನ ಪಟ್ಟಾಗ್ಯೂ, ಅಥವಾ ಈ ಮೊಬಲಗಿನ ವಿಭಾಗ ವಿಷಯದಲ್ಲಿ ಅವರು ಪರಸ್ಪರ ಸಮ್ಮತಿಸದೇ ಹೋದರೂ, ಅಥವಾ ಅಮಲ್ದಾರರ ವಿಚಾರಣೆಯಲ್ಲಿ ಅಂತಾ ಮೊಬಲಗಿನ ವಿಷಯವನ್ನು ಕುರಿತಾಗಲಿ, ಅದರ ವಿಭಾಗವನ್ನು ಕುರಿತಾಗಲಿ, ತಕರಾರ್ ಪುಂಟಾದರೂ ಆಗ ಗ್ರಾಮಕ್ಕೆ ಸಂಬಂಧಪಟ್ಟ ಮೇಯಿಸುವ ಹಕ್ಕುದಾರಿಯು ಅಸ್ಥಳದಲ್ಲಿ ಮಾಮೂಲ್‌ನಂತೆಯೇ ಹರಾಜ್ ಮಾಡಲ್ಪಡತಕ್ಕದ್ದು.

6. ಮೇಲೆಕಂಡ ಕರಾರ್‌ಗಳ ಪ್ರಕಾರ ಮೇಯಿಸುವ ಹಕ್ಕು ಗ್ರಾಮಸ್ಥರಿಗೆ ಕೊಡಲ್ಪಟ್ಟರೆ ಅಂತಾ ಗ್ರಾಮಗಳೊಳಗಣ ಹಿಡುವಳ್ಳೀಯಲ್ಲಿ ಯಿರದ ಸರ್ಕಾರ್ ಜಮ್ಮಿಗಳಲ್ಲಿ ಸದರೀ ಗ್ರಾಮದ ದನಗಳು ಮೇಯುವದಕ್ಕೆ ಯಾವ ನಿರ್ಬಂಧಗಳೂ ಪುಂಟು ಮಾಡಲ್ಪಡಕೂಡದು.

7. ಪ್ರತಿ ಗ್ರಾಮದ ಹುಲ್ಲುಗಾವಲನ್ನು ಮೇಲೆ ವಿಧಿಸಲ್ಪಟ್ಟಂತೆ ವಿಲೇಮಾಡುವದಕ್ಕೆ ಬದಲಾಗಿ ಅಮಲ್ದಾರರು ತಮಗೆ ಆವಶ್ಯಕ ತೋರಿ ಬಂದಾಗ ಗ್ರಾಮಗಳನ್ನು ಅನುಕೂಲವಾದ ಗುಂಪುಗಳಾಗಿ ಮಾಡಿ ಅಂತಾ ಪ್ರತಿ ಗುಂಪಿನ ಮೇಯಿಸುವ ಹಕ್ಕನ್ನು ಪ್ರತ್ಯೇಕವಾಗಿ ವಿಲೇ ಮಾಡಬಹುದು. ಹಾಗೆ ಗುಂಪು ಮಾಡುವಾಗದರಲ್ಲಿ, ಹಾಲೀ ಜಾರೀಯಲ್ಲಿರುವ ಮೇಯಿಸುವ ಯೇರ್ಪಾಡುಗಳಿಗೆ ಪೂರಾನಿಗೇ ಕೊಡಬೇಕಲ್ಲದೆ ಸಾಧ್ಯವಾದ ಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರ ಸಮ್ಮತಿಯನ್ನು ಹೊಂದಿ ಯಿರತಕ್ಕದ್ದು.

ತಾರೀಖು 1ನೇ ಆಗಸ್ಟು 1884.

ನಂ. 99.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿನ ಪ್ರಕಾರ) ಕೆಲವು ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ವೈತ್ತೀವಾರಾಗಿ ಇದರಡಿಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜ್ ಶುರುವಾಗಿ, ಉಳಿಕೆ ಯಾವದೂ ಇಲ್ಲದೆ ವೈತ್ತಿಗಳು ಚಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು ಬಾಕೀ ಬರಬೇಕಾದ ವೈತ್ತಿಗಳು ಹರಾಜ್ ಮಾಡುವದರಿಂದ ಕಂದಾಯದಬಾಕೀ ಮೊಬಲಗು ಪೂರಾ ವಸೂಲಾಗದೇ ಯಿದ್ದರೆ ಪೂರಾ ಗ್ರಾಮವು ನಂತರ ವಿಕ್ರಯಿಸಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಖ್ತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುಖ್ತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು; ಹಾಗಿಲ್ಲದಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫ'ನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಒಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದ್ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮುವುಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮ್ಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜ್ ಆಫೀಸರರಿಂದ ರುಜು ಮೊಹರ್ ಮಾಡೋಸಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲೆ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ'ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೈ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ತಿಪ್ಪಸಂದ್ರ ತಾಲ್ಲೂಕು	ಹೋಬಳಿ	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು	ಹಾಸನ ಹೋಬಳಿ	ಸಮುದ್ರವಳ್ಳಿ	ನರಸಿಹ್ಮಶಾಸ್ತ್ರಿ, ಇತರ 3 ಮಂದಿ	23 4 1	150 6 5	147 6 4	715 8 5	ತಿಪ್ಪಸಂದ್ರ ಕಛೇರಿಯಲ್ಲಿ ಅನುದಾರ ಕಛೇರಿಯಲ್ಲಿ 1884ನೇ ಇಸವಿ ಸೆಪ್ಟಂಬರ್ 2ನೇ ನು ಬೆ ವಿನಾಯಕ್
		ಅಲದಹಳ್ಳಿ	ನರಸಿಹ್ಮಭಟ್ಟ ಇತರ 18 ಮಂದಿ	31 2 4	234 3 10	230 10 2	926 12 5	